(ಇಂದು ದಿನಾಂಕ:17-07-2025 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ: ಎದುರುದಾರರ ಪರ ವಕೀಲರಿಂದ :-**

ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ.

ನಾನು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ಕೆಳಕಂಡ ದಾಖಲಾತಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈ ಕೆಳಕಂಡಂತೆ ನಿಶಾನೆಯಾಗಿ ಗುರುತಿಸಲಾಯಿತು.

| | |
|---|---|
| ನಿ.ಆರ್.1 | ಅಧಿಕಾರ ಪತ್ರ |
| ನಿ.ಆರ್.2 | ವಿಮಾ ಪಾಲಸಿಯ ಧೃಡಿಕೃತ ನಕಲು |
| ನಿ.ಆರ್ -3 | ದೂರಿನ ಪ್ರತಿ |
| ನಿ.ಆರ್-4 | ರಶೀದಿಯ ಝುರಾಕ್ಸ್ ಪ್ರತಿ |
| ನಿ.ಆರ್ -5 | ಟ್ರೂಥ್ ಲ್ಯಾಬ್‌ನವರು ನೀಡಿದ ಸಿಡಿ (ತಕರಾರಿಗೊಳಪಟ್ಟು) |
| ನಿ.ಆರ್ -6 | ಟ್ರೂಥ್ ಲ್ಯಾಬ್‌ನವರು ನೀಡಿದ ದಿಃ 9-06-2025 ರ ಪತ್ರ (ಸಿಡಿಯ ಪ್ರಮಾಣ ಪತ್ರ) |
| ನಿ.ಆರ್ -7 | ಟ್ರೂಥ್ ಲ್ಯಾಬ್‌ನವರು ನೀಡಿದ ವರದಿ |
| ನಿ.ಆರ್ -8 | 63(4)(ಸಿ) ಪ್ರಮಾಣ ಪತ್ರ |
| ನಿ.ಆರ್ -9 | Physical evidence receipt We hereby acknowledgment form |
| ನಿ.ಆರ್-10 | Tax invoice |
| ನಿ.ಆರ್ -11 ಮತ್ತು 13 | ಎರಡು ಲಕೋಟೆಗಳು |

**ಪಾಟೀ ಸವಾಲುಃ ಶ್ರೀ ಜೆ ಆರ್ ಅರ್ಜಿದಾರರ ಪರ ವಕೀಲರಿಂದ.**

1. ಬೇರೆ ಚಾಲಕರು ವಾಹನ ನಡೆಸುತ್ತಿದ್ದ ಅಂತಾ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕಂಪನಿಯ ತನಿಖಾಧಿಕಾರಿಗಳು ಮೃತನ ಹೆಂಡಂದಿರಾದ ಶಾಮಮ್ಮ ಮತ್ತು ದುರ್ಗಮ್ಮರವರ ಹೇಳಿಕೆಗಳನ್ನು ಚಿತ್ರೀಕರಿಸಿದ್ದಾರೆ ಅಂತಾ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತನ ಹೆಂಡಂದಿರಾದ ಶಾಮಮ್ಮ ಮತ್ತು ದುರ್ಗಮ್ಮ ಪ್ರತ್ಯೇಕ್ಷ ಸಾಕ್ಷಿದಾರರು ಅಲ್ಲ ಎಂದರೆ ಸರಿಯಲ್ಲ. ವಿರುಪಾಕ್ಷಿ ಚಾಲನೆ ಮಾಡುತ್ತಿದ್ದ ಅಂತಾ ನಾನು ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವೆಂಕೋಬನ ತಪ್ಪಿನಿಂದಲೇ ಅಪಘಾತವಾಗಿದೆ ಎಂದರೆ ಸರಿಯಲ್ಲ. ಮೃತ ರಾಮಣ್ಣ ರಸ್ತೆ ನಿಯಮಗಳನ್ನು ಪಾಲನೆ ಮಾಡಿ ಚಾಲಕನೆ ಮಾಡಿದರೂ ಕೂಡಾ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾಹನದ ದಾಖಲೆಗಳು ಕ್ರಮಬದ್ದವಾಗಿದ್ದವು ಎಂದರೆ ಸರಿಯಲ್ಲ. ಮೃತ ರಾಮಣ್ಣ ಹೆಲ್ಮೆಟ್ ಧರಿಸಿದ್ದರು ಎಂದರೆ ಸರಿಯಲ್ಲ. ಪೋಲೀಸರು ವೈಜ್ಞಾನಿಕವಾಗಿ ತನಿಖೆ ಮಾಡಿ ದೋ.ಪ. ಸಲ್ಲಿಸಿದರೂ ಕೂಡಾ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕಂಪನಿ ಪರವಾಗಿ ಪೋಲೀಸರ ಮತ್ತು ಅಧಿಕಾರಿಗಳ ವಿರುದ್ದ ದೂರನ್ನು ಸಲ್ಲಿಸಿದ್ದೆ. ದೂರನ್ನು ಪೋಲೀಸರು ಸ್ವೀಕರಿಸಿಲ್ಲ ಅಂತಾ ಸಂಬಂಧಪಟ್ಟ ಅಧಿಕಾರಿಗಳಿಗೆ ವಿಷಯ ತಿಳಿಸಿಲ್ಲ. ಎದುರುದಾರ ನಂ.1 ರವರು ತಪ್ಪಿನಿಂದಲೇ ಅಪಘಾತವಾದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿರುವ ಎಲ್ಲ ಅಂಶಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು